ಸಾಕ್ಷಿದಾರನನ್ನು ಕರೆಸಿ ಪ್ರಮಾಣೀಕರಿಸಲಾಯಿತು. ಪ್ರ.ಮಾ.ದಿಃ 17.09.2022.

**ಮುಖ್ಯ ವಿಚಾರಣೆ – ವಾದಿ ಪರಃ ಶ್ರೀ ಎಸ್. ವಿ. ಹೆಚ್. ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಬರೆಸಿದ ಎಲ್ಲ ವಿಷಯಗಳು ಸತ್ಯವಾಗಿರುತ್ತವೆ. ಸದರಿ ಪ್ರಮಾಣ ಪತ್ರಕ್ಕೆ ನಾನು ಸಹಿ ಮಾಡಿರುತ್ತೇನೆ.

ದಾವೆಗೆ ಸಂಬಂಧಿಸಿದಂತೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಅವುಗಳನ್ನು ನೋಡಿದರೆ ಗುರುತಿಸುತ್ತೇನೆ.

2 ನೇ ಪ್ರತಿವಾದಿಯು 1 ನೇ ಪ್ರತಿವಾದಿಗೆ ಮಾಡಿಕೊಟ್ಟ ಹಕ್ಕು ಬಿಡುಗಡೆ ಪತ್ರದ ದೃಢೀಕೃತ ನಕಲನ್ನು ಹಾಜರುಪಡಿಸಿದ್ದು, ಅದನ್ನು ನಿಪಿ–1 ಎಂದು, ನಾಲ್ಕು ಉತಾರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ-2 ರಿಂದ ನಿಪಿ–5 ಎಂದು, ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಆರು ಕೈ ಬರಹ ಪಹಣಿ ಪತ್ರಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ –6 ರಿಂದ ನಿಪಿ–11 ಎಂದು, 1 ನೇ ಪ್ರತಿವಾದಿಯ ಹೆಸರಿನಲ್ಲಿರುವ ಪಹಣಿ ಪತ್ರವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ–12 ಎಂದು, ನಾಲ್ಕು ಗಣಕೀಕೃತ ಮ್ಯೂಟೇಷನ್ ರೆಜಿಸ್ಟರ ಪ್ರತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ –13 ರಿಂದ ನಿಪಿ–16 ಎಂದು, ಎಂ. ಆರ್.–1311 ಮತ್ತು ಎಂ. ಆರ್.–4069 ಕ್ಕೆ ಸಂಬಂಧಿಸಿದಂತೆ ಎರಡು ಮ್ಯುಟೇಷನ್ ರೆಜಿಸ್ಟರನ ದೃಢೀಕೃತ ನಕಲುಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ–17 ಮತ್ತು ನಿಪಿ–18 ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯಲ್ಲಿ ಕೋರಿದಂತೆ ಡಿಕ್ರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲು – ಪ್ರತಿವಾದಿ ಪರ ವಕೀಲರಿಂದ.**

ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ.

ಸಹಿ/–
ದಿವಾಣಿ ನ್ಯಾಯಾಧೀಶರು,
ಬ್ಯಾಡಗಿ.